# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/ORG.1/Letter/2025-26/1198 ದಿನಾಂಕ:06.10.2026

ಜಿಲ್ಲಾ ಕಾರ್ಯದರ್ಶಿಯವರಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

ಜಿಲ್ಲಾ ಸಂಸ್ಥೆ, ______________________ಜಿಲ್ಲೆ

ಮಾನ್ಯರೆ,

ವಿಷಯ:-ಮೈಸೂರು ವಿಭಾಗೀಯ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ **ಮೈಸೂರು ವಿಭಾಗೀಯ ಮಟ್ಟದ ಗೀತಗಾಯನ ಸ್ಪರ್ಧೆಯನ್ನು** ದಿನಾಂಕ: 25.10.2026 ರಂದು ಕುಮಾರ ಸ್ವಾಮಿ ವಿದ್ಯಾಲಯ, ಸುಬ್ರಹ್ಮಣ್ಯ, ಪಂಜ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ **ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಮಾತ್ರ ಭಾಗವಹಿಸುವುದು**. ಸ್ಪರ್ಧೆಯ ವಿವರಗಳು ಈ ಕೆಳಕಂಡಂತಿದೆ.

| | |
|---|---|
| ಸ್ಪರ್ಧೆ | ಮೈಸೂರು ವಿಭಾಗೀಯ ಮಟ್ಟದ ಗೀತಗಾಯನ ಸ್ಪರ್ಧೆ |
| ಸ್ಥಳ & ತಲುಪುವ ಬಗೆ | ಕುಮಾರ ಸ್ವಾಮಿ ವಿದ್ಯಾಲಯ, ಸುಬ್ರಹ್ಮಣ್ಯ, ಪಂಜ, ಸುಳ್ಯ ತಾಲ್ಲೂಕು,<br>ದಕ್ಷಿಣ ಕನ್ನಡ ಜಿಲ್ಲೆ<br><br>(ಶಾಲೆಯು ಕುಕ್ಕೆ ಸುಬ್ರಹ್ಮಣ್ಯ ಬಸ್ ನಿಲ್ದಾಣದಿಂದ 1.2 ಕಿ.ಮೀ ಅಂತರವಿರುತ್ತದೆ. ರೈಲು ಅಥವಾ ಬಸ್‌ನಲ್ಲಿ ಬರುವ ಸ್ಪರ್ಧಿಗಳಿಗೆ ಬಸ್ ವ್ಯವಸ್ಥೆ ಇದ್ದು, ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಸ್‌ನಲ್ಲಿ ಬರುವುದು ಹಾಗೂ ಕುಕ್ಕೆ ಸುಬ್ರಹ್ಮಣ್ಯ ಬಸ್ ನಿಲ್ದಾಣದಿಂದ ಸ್ಪರ್ಧಾ ಸ್ಥಳಕ್ಕೆ ಆಟೋದಲ್ಲಿ ಬರುವುದು) |
| ದಿನಾಂಕ | 25.10.2026ರ ಭಾನುವಾರದಂದು |
| ಹಾಜರಾಗುವ ಸಯಮ | ಬೆಳಗ್ಗೆ 8.00 ಗಂಟೆಗೆ |
| ಬಿಡುಗಡೆ ಸಮಯ | ಸಂಜೆ 6.00 ಗಂಟೆಗೆ |
| ಊಟೋಪಚಾರದ ವ್ಯವಸ್ಥೆ | ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯವರು ನಿರ್ವಹಿಸಲಿರುವರು |
| ತರಬೇಕಾದ ವಸ್ತುಗಳು | ತಟ್ಟೆ, ಲೋಟ, ಪೆನ್ನು, ನೋಟ್ ಪುಸ್ತಕ, ವೈಯುಕ್ತಿಕ ಸಾಮಗ್ರಿಗಳು |
| ಸ್ಪರ್ಧೆಯ ವಿವರಗಳು | **ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ 06 ಕಬ್ಸ್ ಮತ್ತು 06 ಬುಲ್‌ಬುಲ್ಸ್, 08 ಸ್ಕೌಟ್ಸ್ ಮತ್ತು 08 ಗೈಡ್ಸ್, 06 ರೋವರ್ಸ್ ಮತ್ತು 06 ರೇಂಜರ್ಸ್ ಗಳು ಮಾತ್ರ ಭಾಗವಹಿಸುವುದು**<br>1. ಪ್ರತಿಯೊಂದು ತಂಡಕ್ಕೆ **ಗರಿಷ್ಠ 6** ನಿಮಿಷ ಮಾತ್ರ ಹಾಡಲು ಕಾಲಾವಕಾಶ.(ನಿಲ್ಲುವುದು, ವಿವರಣೆ ನೀಡುವುದು ಎಲ್ಲವು ಸೇರಿ)<br>2. ಕಡ್ಡಾಯವಾಗಿ ಸ್ಕೌಟ್-ಗೈಡ್ ಸಮವಸ್ತ್ರ ಧರಿಸಿಕೊಂಡು ಹಾಡುವುದು.<br>3. ಗೀತಗಾಯನದಲ್ಲಿ ಭಾಗವಹಿಸುವ ಮಕ್ಕಳಿಗೆ ಹಾರ್ಮೋನಿಯಂ, ಚರ್ಮವಾದ್ಯಗಳು, ಗೆಜ್ಜೆ ಮತ್ತು ಕೊಳಲು ಇವುಗಳನ್ನು ಬಳಸಲು ಅವಕಾಶ ನೀಡಲಾಗಿದೆ. ಎಲೆಕ್ಟ್ರಾನಿಕ್, ಕರೋಕೆ, ಟ್ರ್ಯಾಕ್, ಪೆನ್‌ಡ್ರೈವ್, ಕ್ಯಾಸೆಟ್, ಇತ್ಯಾದಿಗಳನ್ನು ಬಳಸುವಂತಿಲ್ಲ. ಧ್ವನಿಮುದ್ರಿತ ಯಾವುದೇ ಉಪಕರಣಗಳನ್ನು ಬಳಸುವಂತಿಲ್ಲ. (ಸ್ಪರ್ಧೆಗೆ ನಿಗಧಿಪಡಿಸಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನಿಗಧಿಯಾಗಿರುವ ಸಂಖ್ಯೆಯಲ್ಲಿ ಅವರುಗಳೇ ವಾದ್ಯಗಳನ್ನು ನುಡಿಸಬಹುದು) |

| | |
|---|---|
| ಭಾಗವಹಿಸುವ ಜಿಲ್ಲೆಗಳು | ಕೊಡಗು, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಯಿಂದ ಜಿಲ್ಲಾ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಮಾತ್ರ ಭಾಗವಹಿಸುವುದು. **ಪೋಷಕರಿಗೆ ಅವಕಾಶವಿರುವುದಿಲ್ಲ**. |
| ಪ್ರಯಾಣ ಭತ್ಯೆ | ಹೋಗಿ ಬರುವ ಪ್ರಯಾಣ ಭತ್ಯೆಯನ್ನು ಆಯಾಯ ಶಾಲಾ/ಕಾಲೇಜು ನಿಧಿಯಿಂದ ಭರಿಸಿಕೊಳ್ಳುವುದು. |
| ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದವರ ಮೊಬೈಲ್ ಸಂಖ್ಯೆ | ಶ್ರೀಮತಿ ವಿಮಲಾ ರಂಗಯ್ಯ, ಜಿಲ್ಲಾ ಆಯುಕ್ತರು(ಗೈ)-9448549722<br>ಶ್ರೀ ಪ್ರತೀಮ್ ಕುಮಾರ್, ಜಿಲ್ಲಾ ಕಾರ್ಯದರ್ಶಿ- 9448216327<br>ಶ್ರೀ ಭರತ್‌ರಾಜ್.ಕೆ, ಎ.ಎಸ್.ಒ.ಸಿ, ದಕ್ಷಿಣ ಕನ್ನಡ ಜಿಲ್ಲೆ-8073895340<br>ಶ್ರೀ. ಎಂ. ಪ್ರಭಾಕರ್ ಭಟ್, ಎಸ್.ಒ.ಸಿ(ಸ್ಕೌ), ಕರ್ನಾಟಕ – 9448914540<br>ಶ್ರೀಮತಿ. ಸಿ. ಮಂಜುಳ, ಎಸ್.ಒ.ಸಿ(ಗೈ), ಕರ್ನಾಟಕ – 9482433516 |

ದಳನಾಯಕರುಗಳು ಉತ್ತಮ ತಯಾರಿಯೊಂದಿಗೆ ಭಾಗವಹಿಸುವುದು. ಭಾಗವಹಿಸಿದವರಿಗೆ ಪ್ರಮಾಣ ಪತ್ರ ಮತ್ತು ವಿಜೇತರಿಗೆ ನಗದು ಬಹುಮಾನವನ್ನು ನೀಡಲಾಗುವುದು. ದಳನಾಯಕರುಗಳು ಮಕ್ಕಳನ್ನು ಸುರಕ್ಷಿತವಾಗಿ ಕರೆತಂದು ಮತ್ತು ಅವರವರ ಮನೆಗೆ ತಲುಪಿಸುವ ಜವಾಬ್ದಾರಿಯಾಗಿರುತ್ತದೆ. ಸ್ಪರ್ಧೆಗೆ ಭಾಗವಹಿಸುವ ಜಿಲ್ಲೆಗಳು ಭಾಗವಹಿಸುವವರ ಸಂಖ್ಯೆ ಮತ್ತು ವಿವರಗಳನ್ನು **ದಿನಾಂಕ:21.10.2026ರ** ಒಳಗಾಗಿ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಮತ್ತು ರಾಜ್ಯ ಸಂಸ್ಥೆಗೆ ತಿಳಿಸುವುದು.

**ವಿ.ಸೂ:- ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯಲ್ಲಿ ವಿಜೇತರಾದ ಕಬ್ಸ್ ಮತ್ತು ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳ ಪಟ್ಟಿಯನ್ನು, ಶಾಲಾ ಕಾಲೇಜು ವಿಳಾಸ ಮತ್ತು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ರಾಜ್ಯ ಸಂಸ್ಥೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಗೆ ಕಳುಹಿಸುವುದು. ಕಳುಹಿಸದೇ ಇದ್ದಲ್ಲಿ ನೇರವಾಗಿ ಸ್ಪರ್ಧೆಗೆ ಹಾಜರಾದಲ್ಲಿ, ಅಂತವರಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವನ್ನು ನೀಡಲಾಗುವುದಿಲ್ಲ**

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ.ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿಗಳು

**ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ:**

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ದಕ್ಷಿಣ ಕನ್ನಡ ಜಿಲ್ಲೆ
2. ಸಂಘಟಕರುಗಳು, ಭಾ.ಸ್ಕೌ&ಗೈ, ಕೊಡಗು, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆ
3. ಕಛೇರಿ ಪ್ರತಿ